






# ಢಾಕಾ ರಾಮಕೃಷ್ಣ ಮಿಷನ್ನಿನ ಶತಮಾನೋತ್ಸವ

ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ಬ್ರಹ್ಮಾನಂದರು ಹಾಗೂ ಸ್ವಾಮಿ ಪ್ರೇಮಾನಂದರು ೧೯೧೬ರಲ್ಲಿ ಢಾಕಾ ರಾಮಕೃಷ್ಣ ಮಠ ಹಾಗೂ ಮಿಷನ್ನನ್ನು ಆರಂಭಿಸಿದರು. ೨೦೧೬ರ ಮಾರ್ಚ್ ೯ರಿಂದ ೧೬ರ ವರೆಗೆ ಢಾಕಾ ಮಿಷನ್ ಶತಮಾನೋತ್ಸವವನ್ನು ನೆರವೇರಿಸಿತು.

**ಉದ್ಘಾಟನೆ:** ಬಾಂಗ್ಲಾದೇಶದ ಮುಖ್ಯನ್ಯಾಯಾಧೀಶರಾದ ಸುರೇಂದ್ರ ಕುಮಾರ್ ಸಿನ್ಹ ಅವರು ಮಾರ್ಚ್ ೯ರಂದು ಶತಮಾನೋತ್ಸವದ ಉದ್ಘಾಟನೆ ಮಾಡಿದರು. ರಾಮಕೃಷ್ಣ ಮಠ, ಮಿಷನ್ನಿನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತ್ ಸ್ವಾಮಿ ಸುಹಿತಾನಂದಜಿ ಉಪಸ್ಥಿತರಿದ್ದರು. ಢಾಕಾ ರಾಮಕೃಷ್ಣ ಮಿಷನ್ನಿನ ಅಧ್ಯಕ್ಷರಾದ ಸ್ವಾಮಿ ಧ್ರುವೇಶಾನಂದಜಿಯವರು ಸ್ವಾಗತ ಕೋರುವುದರ ಮೂಲಕ ೮ ದಿನಗಳ ಕಾರ್ಯಕ್ರಮಗಳು ಆರಂಭಗೊಂಡವು.

**ಆಧ್ಯಾತ್ಮಿಕ ವಿಚಾರಣ ಸಂಕಿರಣ:** ಶತಮಾನೋತ್ಸವದ ಅಂಗವಾಗಿ ನಡೆದ ಈ ಸಂಕಿರಣದಲ್ಲಿ ನೂರಕ್ಕೂ ಹೆಚ್ಚು ಮಂದಿ ಸಾಧು-ಬ್ರಹ್ಮಚಾರಿಗಳು ಭಾಗವಹಿಸಿದ್ದರು. ಸ್ವಾಮಿ ವಾಗೀಶಾನಂದಜಿ, (ಮಠ-ಮಿಷನ್ನಿನ ಉಪಾಧ್ಯಕ್ಷರು), ಸ್ವಾಮಿ ಗಿರೀಶಾನಂದಜಿ, ಸ್ವಾಮಿ ಸುವೀರಾನಂದಜಿ (ಸಹಕಾರ್ಯದರ್ಶಿಗಳು) ಸ್ವಾಮಿ ಸುಪರ್ಣಾನಂದಜಿ, ಸ್ವಾಮಿ ತತ್ತ್ವವಿದಾನಂದಜಿ, ಸ್ವಾಮಿ ಪರದೇವಾನಂದಜಿ, ಸ್ವಾಮಿ ಅಖಿಲೇಶಾನಂದಜಿ ಮೊದಲಾದವರು ಇವರಲ್ಲಿ ಪ್ರಮುಖರು. ವಿವಿಧ ಶಾಖಾಕೇಂದ್ರಗಳಿಂದ ಬಂದ ಅಧ್ಯಕ್ಷರುಗಳು ಹಾಗೂ ಇತರ ಸಂನ್ಯಾಸಿಗಳು ವಿವಿಧ ಹಲವು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡರು.

ಬಾಂಗ್ಲಾದೇಶದ ಮಹಾನಾಮ ಸಂಪ್ರದಾಯದ ಅಧ್ಯಕ್ಷರಾದ ಶ್ರೀ ಕಾಂತಿಬಂಧು ಬ್ರಹ್ಮಚಾರಿ, ಬಾಂಗ್ಲಾದೇಶ ಸರಕಾರದ ಮಂತ್ರಿಗಳಾದ ಬೇಗಂ ಮತಿಯಾ ಚೌಧುರಿ, ತೊಫಾಯೆಲ್ ಅಹಮದ್, ಅಸದುಜಾಮನ್ ಖಾನ್ ಕಮಲ್, ಅನಿಸುಲ್ ಇಸ್ಲಾಂ ಮಹಮುದ್, ಬಾಂಗ್ಲಾದೇಶದಲ್ಲಿರುವ ಭಾರತದ ರಾಯಭಾರಿ ಹರ್ಷವರ್ಧನ್ ಶೃಂಗಲಾ ಮುಂತಾದವರು ಚರ್ಚೆಯಲ್ಲಿ ಪಾಲ್ಗೊಂಡಿದ್ದರು.

ಚರ್ಚಾಗೋಷ್ಠಿಗಳಲ್ಲಿ ಪಾಲ್ಗೊಂಡ ವಿದ್ವಾಂಸರುಗಳಲ್ಲಿ ನ್ಯಾಯಾಧೀಶರಾದ ಶ್ರೀ ಸೌಮೇಂದ್ರ ಸರ್ಕಾರ್, ಶ್ರೀ ಆಲಾಪನ್ ಬಂದೋಪಾಧ್ಯಾಯ, ಪ್ರೊ.ಸೊನಾಲಿ ಚಕ್ರವರ್ತಿ(ಕಲ್ಕತ್ತಾ ವಿ.ವಿ. ಉಪಕುಲಪತಿಗಳು), ಪ್ರೊ. ಅಮಿನುಲ್ ಇಸ್ಲಾಂ (ಢಾಕಾ ವಿ.ವಿ.), ದೆಹಲಿ ವಿಶ್ವವಿದ್ಯಾಲಯದ ಪ್ರೊ. ಸಯ್ಯದ್ ಅನ್ವರ್ ಹೊಸೈನ್, ಪ್ರೊ. ಈನಬೋಧಿ ಭಿಕ್ಕು (ಚಿಟ್ಟಗಾಂಗ್ ವಿ.ವಿ.), ರಾಜರ್ಷಿ ವಿಶ್ವವಿದ್ಯಾನಿಲಯದ ಪ್ರೊ. ಸೋಮನಾಥ ಭಟ್ಟಾಚಾರ್ಯ, ಬಿಷಪ್ ಶರತ್ ಫ್ರಾನ್ಸಿಸ್ ಗೊಮೆಜ್ (ಢಾಕಾ), ಪ್ರೊ. ರೀಟಾ ದತ್ತ, ಡಾ. ಸಮಂತಲಾಲ್ ಸೇನ್, ಅಶೋಕ್ ದಾಸಗುಪ್ತ, ಪ್ರೊ. ನಿಖಿಲ್ ಭಟ್ಟಾಚಾರ್ಯ ಮುಂತಾದವರು ಪ್ರಮುಖರು.

ಪ್ರತಿದಿನ ಪ್ರಾರ್ಥನೆ, ಪೂಜೆ, ಕೀರ್ತನೆಗಳಲ್ಲದೆ, ಕಥಾಮೃತ, ಜಪಯಜ್ಞ, ಸಪ್ತಶತೀ ಚಂಡೀಹೋಮ ನಡೆದವು. ಅದ್ವೈತ ಆಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ತತ್ತ್ವವಿದಾನಂದರು ಸಪ್ತಶತೀ ಚಂಡೀಹೋಮದ ಪ್ರಧಾನ ಅರ್ಚಕರಾಗಿ ನೇತೃತ್ವ ವಹಿಸಿದ್ದರು. ಬಾಂಗ್ಲಾದೇಶದ **ವಿವೇಕಾನಂದ ಶಿಕ್ಷಾ ಓ ಸಂಸ್ಕೃತಿ ಪರಿಷತ್**ನ ಸದಸ್ಯರು ನಡೆಸಿಕೊಟ್ಟ **ಯುವ ಸಮ್ಮೇಳನ**, ಬಾಂಗ್ಲಾದೇಶದ **ಶಾರದಾ ಸಂಘ**ದ ಸದಸ್ಯರು ನಡೆಸಿಕೊಟ್ಟ **'ಮಾತೃ ಸಮ್ಮೇಳನ'**, ಬಾಂಗ್ಲಾದೇಶದ ರಾಮಕೃಷ್ಣ-ವಿವೇಕಾನಂದ ಭಾವಪ್ರಚಾರ ಸಂಸದ್ ನಡೆಸಿಕೊಟ್ಟ **ಭಾವ ಪ್ರಸಾರ ಸಮ್ಮೇಳನ** ಗಮನಾರ್ಹ ಕಾರ್ಯಕ್ರಮಗಳಾಗಿದ್ದವು. 'ಇಂದಿನ ಯುವ ಜನತೆಗೆ ಸ್ವಾಮಿ ವಿವೇಕಾನಂದರ ಕರೆ' 'ಶತರೂಪೇ ಶಾರದಾ','ಸ್ವಾಮಿ ವಿವೇಕಾನಂದರ ವಿಶ್ವಸಂದೇಶ', 'ರಾಮಕೃಷ್ಣ-ವಿವೇಕಾನಂದರ ಆದರ್ಶ' - ಇವೇ ಮೊದಲಾದ ಹಲವು ವಿಚಾರಸಂಕಿರಣಗಳು ನಡೆದವು.

**ಸಾಂಸ್ಕೃತಿಕ ಕಾರ್ಯಕ್ರಮಗಳು:** ಡಾ. ಸುಭದ್ರಾ ದೇಸಾಯಿ (ಅಶೋಕ ವಿ.ವಿ. ನವದೆಹಲಿ), ಅದಿತಿ ಮುನ್ಷಿ (ಕಲ್ಕತ್ತಾ), ಬಾಂಗ್ಲಾದೇಶದ ಅಂತರರಾಷ್ಟ್ರೀಯ ಖ್ಯಾತಿಯ ಶ್ರೀ ಸುಬಿರ್ ನಂದಿ, ಶ್ರೀರತೀಂದ್ರನಾಥ ರಾಯ್ ಹಾಗೂ ಫಾತಿಮಾ-ತುಜ್-ಜೋಹುರಾ ಮುಂತಾದವರು ಶಾಸ್ತ್ರೀಯ ಸಂಗೀತ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಪಾಟ್ನಾ ರಾಮಕೃಷ್ಣ ಮಠದ







ಸ್ವಾಮಿ ಸುಖಾನಂದಜಿ **'ರಾಮ ಚರಿತ ಮಾನಸ'**, ನಿಮಾಯ್ ದಾಸ್ ಹಾಗೂ ತಪನ್ ಮಂಡಲ್ ಅವರು **'ರಾಮಾಯಣ ಗೀತೆ'** ನಡೆಸಿ ಕೊಟ್ಟರು. ಮುಂಬೈನ ಪದ್ಮಶ್ರೀ ಶೇಖರ್ ಸೇನ್ ಅವರು ಸ್ವಾಮಿ ವಿವೇಕಾನಂದರನ್ನು ಕುರಿತ **ಏಕಪಾತ್ರಾಭಿನಯವನ್ನು** ನಡೆಸಿಕೊಟ್ಟರು.

ಇತರ ದಿನಗಳಲ್ಲಿ **'ಕರುಣಾಧಾರಾಯ್ ಏಶೋ'**, **'ಗಂತವ್ಯ ವಿವೇಕಾ ನಂದ'**, **'ಆತ್ಮಪರಿಚಯ'**, **'ಸಂಪ್ರೀತಿ'** ಮೊದಲಾದ ನಾಟಕಗಳನ್ನು ಪ್ರದರ್ಶಿಸಲಾಯಿತು. ರಾಮಕೃಷ್ಣ ಮಿಷನ್ ಹೈಸ್ಕೂಲ್ ಹಾಗೂ ಶಾರದಾ ಶಿಶು ನಿಕೇತನದ ವಿದ್ಯಾರ್ಥಿಗಳು ನಡೆಸಿಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮಗಳೂ ಶತಮಾನೋತ್ಸವಕ್ಕೆ ಮೆರುಗು ನೀಡಿದವು. ಸ್ವಾತಂತ್ರ್ಯ ದಿನದಂದು ರಕ್ತದಾನ, ಮಧುಮೇಹ ಅರಿವು ಮುಂತಾದ ಕಾರ್ಯಕ್ರಮಗಳು ನಡೆದವು. **'ಸರ್ವ ಧರ್ಮಸಮನ್ವಯ ಹಾಗೂ ಸಹಬಾಳ್ವೆ'** ಹಾಗೂ **ಶಾಂತಿ ಮೆರವಣಿಗೆ** ಇವು ಸ್ವಾಮಿ ವಿವೇಕಾನಂದರ ಧ್ಯೇಯ-ಆದರ್ಶಗಳನ್ನು ಸಾಕಾರಗೊಳಿಸುವಲ್ಲಿ ಯಶಸ್ವಿಯಾದ ಕಾರ್ಯಕ್ರಮಗಳೆನಿಸಿಕೊಂಡವು. ಸುಮಾರು ನಾಲ್ಕು ಸಾವಿರ ಮಂದಿ ಈ ಎಲ್ಲ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡರು.







# ಪುಣೆ ರಾಮಕೃಷ್ಣ ಮಠದಲ್ಲಿ "ವಿವೇಕಾನಂದ ಪುಣ್ಯ ನಗರಿ ಸೇವಾ ಪ್ರಕಲ್ಪ"

ಪುಣೆ ರಾಮಕೃಷ್ಣ ಮಠದಲ್ಲಿ ೨೦೧೭ರ ಮೇ ೧೦ ಹಾಗೂ ೧೧ ರಂದು **"ವಿವೇಕಾನಂದ ಪುಣ್ಯನಗರಿ ಸೇವಾ ಪ್ರಕಲ್ಪ"**ದ ಉದ್ಘಾಟನೆ ನೆರವೇರಿತು. ಕೊಳಗೇರಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ಬಡಜನರ ಸೇವೆ ಹಾಗೂ ಏಳಿಗೆಗಾಗಿ ಆರಂಭಿಸಿರುವ ಹೊಸ ಚಟುವಟಿಕೆಯೇ ಈ 'ಸೇವಾ ಪ್ರಕಲ್ಪ.' ಪುಣೆ ರಾಮಕೃಷ್ಣ ಮಠದ ಮೂರೂ ಭಾಗಗಳಲ್ಲಿ ಕೊಳೆಗೇರಿಗಳಿದ್ದು, ಅಲ್ಲಿನ ಬಹುಪಾಲು ಜನರು ಮದ್ಯಪಾನ, ಇತರ ಮಾದಕ ದ್ರವ್ಯ ಹಾಗೂ ಜೂಜಾಟವೇ ಮೊದಲಾದ ವ್ಯಸನಗಳಿಗೆ ಬಲಿಯಾದವರು. ಅವರ ಬಡತನ ಹಾಗೂ ಇತರ ಆರ್ಥಿಕ - ಸಾಮಾಜಿಕ ಸಮಸ್ಯೆಗಳಿಗೆ ಮದ್ಯಪಾನವೇ ಮೂಲ ಕಾರಣವಾಗಿದೆ. ಅವರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಮೇಲೆತ್ತಲು ಪುಣೆ ಆಶ್ರಮ ಆರಂಭಿಸಿರುವ ಯೋಜನೆಯೇ "ವಿವೇಕಾನಂದ ಪುಣ್ಯನಗರಿ ಸೇವಾ ಪ್ರಕಲ್ಪ". ಈ ಯೋಜನೆಯಲ್ಲಿ ಮದ್ಯಪಾನ ವ್ಯಸನದಿಂದ ಬಿಡುಗಡೆ, ಪುನರ್ವಸತಿ, ಮುಂದಿನ ಹಂತಗಳಲ್ಲಿ ವೈದ್ಯಕೀಯ ಹಾಗೂ ಶೈಕ್ಷಣಿಕ ನೆರವು ನೀಡುವಿಕೆ — ಇತ್ಯಾದಿ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ. ಇದರೊಂದಿಗೆ, ಶ್ರೇಷ್ಠ ಜೀವನ ಹಾಗೂ ವ್ಯಸನಮುಕ್ತ ಜೀವನವನ್ನು ನಡೆಸುತ್ತಾ ಗೌರವಾನ್ವಿತ ಬದುಕನ್ನು ನಡೆಸಲು ಅವರಿಗೆ ಪ್ರೇರಣೆ ನೀಡಲು ಕಾರ್ಯಕ್ರಮಗಳನ್ನು ನಡೆಸಲಾಗುವುದು.

ಈಗಾಗಲೇ ಬುದ್ಧ ಪೌಣಿಮೆಯ ದಿನದಂದು (ಮೇ ೧೦, ೨೦೧೭) ೧೦ ಮಂದಿ ಆಯ್ದ ಮದ್ಯಪಾನ ವ್ಯಸನಿಗಳು ಭಗವಾನ್ ಬುದ್ಧನ ಹೆಸರಿನಲ್ಲಿ ಮದ್ಯಪಾನ ಚಟವನ್ನು ಬಿಡುವುದಾಗಿ ಪ್ರತಿಜ್ಞೆ ಮಾಡಿದ್ದಾರೆ. ಅವರು ತಮ್ಮ ಕುಟುಂಬದ ಸದಸ್ಯರ, ಸಂನ್ಯಾಸಿಗಳ ಹಾಗೂ ಮಠದ ನಿಕಟಭಕ್ತರ ಸಮ್ಮುಖದಲ್ಲಿ ಈ ಪ್ರತಿಜ್ಞೆಯನ್ನು ತೆಗೆದುಕೊಂಡರು. ಅವರಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಈ ಹತ್ತು ಮಂದಿಗಳು ತೋರಿಸಿದ ಸಾಹಸೀ ಕಾರ್ಯಕ್ಕಾಗಿ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಭೋಜನ ವ್ಯವಸ್ಥೆಯನ್ನು ಮಾಡಲಾಗಿತ್ತು.

೨೦೧೭ರ ಮೇ ೧೧ ರಂದು **"ವಿವೇಕಾನಂದ ಪುಣ್ಯನಗರಿ ಸೇವಾ ಪ್ರಕಲ್ಪ"** ಯೋಜನೆಯ ನಿಮಿತ್ತ ಹಾಗೂ ಬುದ್ಧಪೂರ್ಣಿಮೆ ಅಂಗವಾಗಿ ಕೊಳೆಗೇರಿಯ ನಿವಾಸಿಗಳಿಗಾಗಿ ಒಂದು ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಬುದ್ಧನ ಅನುಯಾಯಿಗಳಾದ ಸುಮಾರು ೮೦೦ ಮಂದಿ ಕೊಳೆಗೇರಿಯ ನಿವಾಸಿಗಳು ಇದರಲ್ಲಿ ಭಾಗವಹಿಸಿದ್ದರು. ಪುಣೆ ರಾಮಕೃಷ್ಣ ಮಠದ ಅಧ್ಯಕ್ಷರು ಹಾಗೂ ಶ್ರೀ ಭಂತೇರಾಜ್ ಶತಾನಿ (ಬೌದ್ಧ ಸಂನ್ಯಾಸಿ ಹಾಗೂ ವಿದ್ವಾಂಸರು) ಬುದ್ಧನ ಜೀವನ ಹಾಗೂ ಉಪದೇಶಗಳ ಬಗ್ಗೆ ಮಾತನಾಡಿದರು. ಪ್ರತಿನಿಧಿಗಳಿಗೆ ಬುದ್ಧನನ್ನು ಕುರಿತ ಪುಸ್ತಕಗಳನ್ನು ಹಾಗೂ ಆಹಾರ ಪ್ಯಾಕೆಟ್‌ಗಳನ್ನು ವಿತರಿಸಿ ಸನ್ಮಾನಿಸಲಾಯಿತು.

ಈ **"ವಿವೇಕಾನಂದ ಪುಣ್ಯನಗರಿ ಸೇವಾ ಪ್ರಕಲ್ಪ"**ದ ಮೂಲಕ ನಮ್ಮ ಸಮಾಜದಲ್ಲಿ ನಿಜವಾಗಿಯೂ ಅಗತ್ಯವಿರುವ ವ್ಯಕ್ತಿಗಳಿಗೆ ಸೇವೆಯನ್ನು ಸಲ್ಲಿಸಲು, ಹಾಗೂ ಕೊಳೆಗೇರಿ ನಿವಾಸಿಗಳ ಹಾಗೂ ಮಠದ ನಿವಾಸಿಗಳ ನಡುವೆ ಸಂಪರ್ಕ ಬಲಪಡಿಸಲು ಸಾಧ್ಯವಾಗುವುದು ಎಂದು ಪುಣೆ ರಾಮಕೃಷ್ಣ ಮಠವು ಬಲವಾಗಿ ನಂಬಿದೆ.







**ಸುದ್ದಿ ಸಂಚಯ**

# ಕರೀಂಗಂಜ್ ರಾಮಕೃಷ್ಣ ಮಿಷನ್ನಿನ ಶತಮಾನೋತ್ಸವದ ಉದ್ಘಾಟನೆ

**ಕ**ರೀಂಗಂಜ್ ರಾಮಕೃಷ್ಣ ಮಿಷನ್ ಈ ವರ್ಷ ತನ್ನ ೧೦೦ನೇ ವರ್ಷವನ್ನು ಪೂರ್ಣಗೊಳಿಸಿದೆ. ಇದರ ಆಚರಣೆಯ ಪ್ರಯುಕ್ತ ಮೇ ೨೦೧೭ ರಿಂದ ನವೆಂಬರ್ ೨೦೧೮ರ ವರೆಗೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಈ ಶತಮಾನೋತ್ಸವವನ್ನು ಸ್ಮರಣಾರ್ಹವನ್ನಾಗಿಸಲು ಕೆಲವು ಶಾಶ್ವತ ಯೋಜನೆಗಳನ್ನು ಆಶ್ರಮವು ಹಮ್ಮಿಕೊಂಡಿದೆ. ೧) ಶ್ರೀದುರ್ಗಾ ಮಂಟಪದ ನಿರ್ಮಾಣ ೨) ಪ್ರಸಾದ ವಿತರಣೆಯ ಭೋಜನಶಾಲೆ ೩) ಸ್ವಾಮಿ ವಿವೇಕಾನಂದರ ಪೂರ್ಣ ಪ್ರಮಾಣದ ಕಂಚಿನ ವಿಗ್ರಹದ ಸ್ಥಾಪನೆ.

ಈ ಶತಮಾನೋತ್ಸವದ ಉದ್ಘಾಟನೆಯನ್ನು ರಾಮಕೃಷ್ಣ ಮಠ ಹಾಗೂ ಮಿಷನ್ನಿನ ಉಪಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಗೌತಮಾನಂದಜಿಯವರು ೨೦೧೭ರ ಮೇ ೧೦ನೇ ತಾರೀಖು ಬುದ್ಧ ಪೂರ್ಣಿಮೆಯ ಪುಣ್ಯದಿನದಂದು ನೆರವೇರಿಸಿದರು. ಸ್ವಾಮಿ ಜುಷ್ಟಾನಂದಜೀ, ಸ್ವಾಮಿ ನರೇಶಾನಂದಜಿ, ಸ್ವಾಮಿ ಸತ್ಯಸ್ಥಾನಂದಜಿ ಹಾಗೂ ಇನ್ನಿತರ ಸಂನ್ಯಾಸಿಗಳು, ಸುಮಾರು ೫೦೦ ಮಂದಿ ಭಕ್ತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ೧೧೦ ಮಂದಿ ಬಡ ಹಾಗೂ ಅರ್ಹ ಜನರಿಗೆ ಕಂಬಳಿ, ಸೊಳ್ಳೆಪರದೆ, ಧೋತಿ/ಸೀರೆ ಹಾಗೂ ಸಿಹಿ ತಿಂಡಿಯ ಪ್ಯಾಕೇಟ್‌ಗಳನ್ನು ''**ದರಿದ್ರ ನಾರಾಯಣ ಸೇವೆ**''ಯ ಅಂಗವಾಗಿ ಹಂಚಲಾಯಿತು. ಶತಮಾನೋತ್ಸವದ ಅಂಗವಾಗಿ ಹಲವು ಬಗೆಯ ಕಾರ್ಯಕ್ರಮಗಳು ವರ್ಷವಿಡೀ ನಡೆಯಲಿವೆ.

# ತೆಂಕಲಮೋಳೆಯಲ್ಲಿ ಆರೋಗ್ಯ ತಪಾಸಣಾ ಶಿಬಿರ

**ಮೈ**ಸೂರು ಶ್ರೀರಾಮಕೃಷ್ಣ ಆಶ್ರಮ ಹಾಗೂ ಬೆಂಗಳೂರಿನ ಕಲ್ಪತರು ಟ್ರಸ್ಟ್ ಇದರ ಸಂಯುಕ್ತ ಆಶ್ರಯದಲ್ಲಿ ಚಾಮರಾಜನಗರ ತಾಲ್ಲೂಕಿನ ತೆಂಕಲಮೋಳೆ ಗ್ರಾಮದಲ್ಲಿ ನಡೆದ **ಉಚಿತ ಆರೋಗ್ಯ ತಪಾಸಣೆ ಶಿಬಿರ**ದಲ್ಲಿ ೩೫೦ಕ್ಕೂ ಹೆಚ್ಚು ಮಂದಿ ಗ್ರಾಮಸ್ಥರು ತಪಾಸಣೆಗೆ ಒಳಪಟ್ಟರು.






ಶಿಬಿರವನ್ನು ಉದ್ಘಾಟಿಸಿದ ಬಳಿಕ ಮಾತನಾಡಿದ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮಜ್ಞಾನಂದಜಿ ಮಹಾರಾಜ್, ''ಜನರು ಆರೋಗ್ಯದ ಕಡೆ ಹೆಚ್ಚು ಗಮನ ಹರಿಸಬೇಕು ಮತ್ತು ಸ್ವಚ್ಛತೆ ಕಾಪಾಡಬೇಕು. ಮಕ್ಕಳಿಗೆ ಉತ್ತಮ ಹಾಗು ಮೌಲ್ಯಯುತ ಶಿಕ್ಷಣ ಕೊಡಿಸುವುದರ ಮೂಲಕ ಗ್ರಾಮದಲ್ಲಿ ಎಲ್ಲರೂ ಸೌಹಾರ್ದಯುತ ಜೀವನ ನಡೆಸಬೇಕು'' ಎಂದು ಸಲಹೆ ನೀಡಿದರು.

ಆಶ್ರಮದ ವತಿಯಿಂದ ಮುಂದಿನ ದಿನಗಳಲ್ಲಿ ಪ್ರತಿದಿನ ಸಂಜೆ ವಿಶೇಷ ತರಗತಿ ನಡೆಸುವ ಮೂಲಕ ಶೈಕ್ಷಣಿಕ ಪ್ರಗತಿಗೆ ಕಾರ್ಯಕ್ರಮ ರೂಪಿಸಲಾಗುವುದು. ಅಲ್ಲದೆ ಪ್ರತಿನಿತ್ಯ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡಲಾಗುವುದೆಂದು ತಿಳಿಸಿದರು.

ಇದೇ ಸಂದರ್ಭದಲ್ಲಿ **ಪ್ರಾಂಜಲ್ಸ್ ೩.ಎಂ ಸಲ್ಯೂಷನ್** ವತಿಯಿಂದ ಧೂಳು ಮತ್ತು ಪ್ಲಾಸ್ಟಿಕ್‌ನಿಂದ ಉಂಟಾಗುವ ತೊಂದರೆ ಕುರಿತು ಅರಿವು ಮೂಡಿಸಲಾಯಿತು. ಮುನ್ನೂರು ಜನರಿಗೆ ಮಾಸ್ಕ್ ವಿತರಣೆ ಮಾಡಲಾಯಿತು. **ದೀನಬಂಧು ಶಿಕ್ಷಣ ಸಂಸ್ಥೆ**ಯ ವತಿಯಿಂದ ಶಿಬಿರದಲ್ಲಿ ಪಾಲ್ಗೊಂಡಿದ್ದ ಜನರಿಗೆ ಉಪಹಾರ ನೀಡಲಾಯಿತು.

ಆಶ್ರಮದ ಹಿರಿಯ ಸನ್ಯಾಸಿಗಳಾದ ಸ್ವಾಮಿ ನಿತ್ಯಸ್ಥಾನಂದಜಿ ಮಹಾರಾಜ್, ಕಲ್ಪತರು ಅಧ್ಯಕ್ಷ ಗೌತಮ್ ಘೋರ್ಪಡೆ, ಕಾರ್ಯದರ್ಶಿ ಶಿವಕುಮಾರ್, ಟ್ರಸ್ಟಿಗಳಾದ ಡಾ. ಶಿವಕಿಶೋರ್, ಸತೀಶ್ ಗುಡುಗೇ, ಹೇಮಂತ್, ದೀನಬಂಧು ಆಶ್ರಮದ ಗೌರವ ಕಾರ್ಯದರ್ಶಿ ಜಿ.ಎಸ್. ಜಯದೇವ್, ವಿವೇಕಾನಂದ ಟ್ರಸ್ಟ್ ಅಧ್ಯಕ್ಷ ಮಲ್ಲೇಶ್, ಡಾ. ಸ್ವರೂಪ್, ಡಾ. ಮಹದೇವು, ಡಾ. ಅಂಜಲಿ, ಡಾ. ಮೇಘಾ, ಡಾ.ಕನ್ಯಾ ಹಾಗೂ ಇತರರು ಇದ್ದರು.

Managing Editor : Swami Atmajnananda    Editor : Swami Jnanayogananda
Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020